ಆಕಾಶವಾಣಿ 11.07.2025

ಪ್ರದೇಶ ಸಮಾಚಾರ 07.05 A.M.

ಓದುತ್ತಿರುವವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

- ಆತ್ಮ ನಿರ್ಭರ ಭಾರತ ಅಭಿಯಾನ: ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆ, 2026ರ ಮಾರ್ಚ್ ಅಂತ್ಯದ ವರೆಗೆ, ವಿಸ್ತರಣೆ.
- ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ, ಜೇನು ಸಾಕಣೆ ಉದ್ಯಮಕ್ಕೆ, 'ಸ್ಮಾಲ್ ಹೈವ್ ಬೀಟಲ್' ಕೀಟ ಬಾಧೆ.
- 'ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ': ಅಕ್ಟೋಬರ್ 7ರ ವರೆಗೆ, ರಾಜ್ಯಾದ್ಯಂತ, 90 ದಿನಗಳ ಲೋಕ್ ಅದಾಲತ್.
- ಇಂದು, ವಿಶ್ವ ಜನಸಂಖ್ಯಾ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಪಿ.ಎಂ.ಎಫ್ಎಮ್ಇ

ಆತ್ಮ ನಿರ್ಭರ ಭಾರತ ಅಭಿಯಾನದಡಿ, ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ, ನಿಯಮಬದ್ಧ ಗೊಳಿಸುವಿಕೆ ಯೋಜನೆ, ಪಿ.ಎಂ.ಎಫ್.ಎಂ.ಇ. ಯೋಜನೆಯನ್ನು, 2026ರ ಮಾರ್ಚ್ ತಿಂಗಳ ಅಂತ್ಯದ ವರೆಗೆ, ವಿಸ್ತರಿಸಲಾಗಿದೆ.

ರೈತರು, ಯುವ ಉದ್ಯಮಿಗಳು, ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳಿಗೆ, ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತಿಗೆ, ಅನುವಾಗಲಿದೆ.

ಪಿ.ಎಂ.ಎಫ್.ಎಂ.ಇ ಯೋಜನೆ ಸಂಪನ್ಮೂಲ ವ್ಯಕ್ತಿ, ಧಾರವಾಡದ ಬಂಡೇರಾವ ಪಟವಾರಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಬಂಡೇರಾವ ಪಟವಾರಿ ಧ್ವನಿ 47 ಸೆಕೆಂದುಗಳು

<><><>

ಹರ್ಷ/ಹೊಂಗಲ್/ಕೆ.ವಾ.ಇ.ಧಾ./ಸುರೇಶ ಹಿರೇಮಠ/ಸ್ಕೋಪ್ ಸಂ.ಪ್ರ.

*ಚಲುವರಾಯ ಸ್ವಾಮಿಕೃಷಿ*

*ಕಡಿಮೆ ಕೃಷಿ ಭೂಮಿ ಹೊಂದಿರುವ ರೈತರೂ ಸಹ, ವೃಕ್ಷಾಧಾರಿತ ಹಾಗೂ ತೋಟಗಾರಿಕೆ ಬೆಳೆಗಳ ಮೂಲಕ, ಮಿಶ್ರ ಬೇಸಾಯ ಪದ್ಧತಿ ಅನುಸರಿಸಿದಲ್ಲಿ, ಕೃಷಿಯನ್ನು ಲಾಭದಾಯಕವಾಗಿಸಬಹುದು ಎಂದು, ಕೃಷಿ ಖಾತೆ ಸಚಿವ, ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ.*

*ಚಾಮರಾಜನಗರ ಜಿಲ್ಲೆ, ಹನೂರು ತಾಲೂಕು, ಚಿಂಚಳ್ಳಿ ಗ್ರಾಮದ, ಪ್ರಗತಿಪರ ರೈತ ದಯಾನಂದ ಅವರೊಂದಿಗೆ ಅವರು, ಸಮಾಲೋಚಿಸಿದರು.*

<><><>

*ಜೇನು ಕೃಷಿರೋಗ*

*'ಥೈಸ್ಯಾಕ್ ಬ್ರೂಡ್ ವೈರಾಣು' ರೋಗದ ಹಾವಳಿಯಿಂದ ಬಳಲಿರುವ, ರಾಜ್ಯದ ಜೇನು ಸಾಕಾಣಿಕೆ ಉದ್ಯಮಕ್ಕೆ, 'ಸ್ಮಾಲ್ ಹೈವ್ ಬೀಟಲ್' ಎಂಬ, ಹೊಸ ಕೀಟ ಬಾಧೆ ಕಾಣಿಸಿಕೊಂಡಿದೆ ಎಂದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ, ಜೇನು ಕೃಷಿ ವಿಜ್ಞಾನಿಗಳು ತಿಳಿಸಿದ್ದಾರೆ.*

*ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ, ಮೆಲ್ಲಿಫೆರಾ ಮತ್ತು ತುಡುವೆ ಜೇನು ಕುಟುಂಬಗಳಲ್ಲಿ, ಈ ಹೊಸ ರೋಗ ಬಾಧೆ ಕಂಡು ಬಂದಿದೆ ಎಂದು, ಮಾಹಿತಿ ನೀಡಿದ್ದಾರೆ.*

*ಇತ್ತೀಚೆಗೆ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಆಂಧ್ರ ಪ್ರದೇಶ ರಾಜ್ಯಗಳಲ್ಲಿ, ಈ ರೋಗದಿಂದ, 20 ಸಾವಿರಕ್ಕೂ ಹೆಚ್ಚು ಜೇನು ಕುಟುಂಬಗಳು ನಾಶವಾದ ವರದಿಗಳಿವೆ.*

*ಸೋಂಕಿತ ಖಾಲಿ ಎರಿಗಳನ್ನು ಸುಟ್ಟು ಹಾಕುವುದು; ಪರಿಸರ ಸ್ನೇಹಿ ಕೀಟ ನಾಶಕ ಸಿಂಪಡಣೆ ಮಾಡುವುದರ ಮೂಲಕ, ಕೀಟ ನಿಯಂತ್ರಣ ಮಾಡಬಹುದು ಎಂದು ಜೇನು ಕೃಷಿ ಸಂಶೋಧಕರು ತಿಳಿಸಿದ್ದಾರೆ.*

*ಕರ್ನಾಟಕದ ಮಲೆನಾಡ ಜೇನು ಸಾಕಾಣಿಕೆ, ದೇಶದಲ್ಲಿಯೇ ವಿಶೇಷವಾದದ್ದು. 50 ಸಾವಿರಕ್ಕೂ ಹೆಚ್ಚು ಜೇನು ಕೃಷಿಕರನ್ನೊಳಗೊಂಡ, ಲಕ್ಷಾಂತರ ತುಡುವೆ ಜೇನು ಕುಟುಂಬಗಳ ನಿರ್ವಹಣೆಯಿಂದ, ವಾರ್ಷಿಕ ಸಾವಿರದ 200 ಟನ್‌ಗಳಷ್ಟು ಜೇನುತುಪ್ಪ ಉತ್ಪಾದನೆಯಾಗುತ್ತಿದೆ.*

*ಕ್ಯಾಂಪ್ಕೋ/ಶುಲ್ಕ*

*ಕ್ಯಾಂಪ್ಕೋದಿಂದ ಸಂಗ್ರಹಿಸುತ್ತಿರುವ, ಮಾರುಕಟ್ಟೆ ಶುಲ್ಕವನ್ನು, ಮೊದಲಿನಂತೆ, ಶೇಕಡ ಸೊನ್ನೆ ದಶಾಂಶ **48** ರ ಷ್ಟ ಆಕರಿಸಬೇಕು ಎಂಬ ಬೇಡಿಕೆಯನ್ನು ಪರಿಗಣಿಸುವುದಾಗಿ, ಕೃಷಿ ಮಾರುಕಟ್ಟೆ ಖಾತೆ ಸಚಿವ ಶಿವಾನಂದ ಪಾಟೀಲ, ಭರವಸೆ ನೀಡಿದ್ದಾರೆ.*

*ಬೆಂಗಳೂರಿನ ಕೃಷಿ ಮಾರಾಟ ಇಲಾಖೆ ಕಚೇರಿಯಲ್ಲಿ, ಕ್ಯಾಂಪ್ಕೋ ಅಧ್ಯಕ್ಷ ಎ. ಕಿಶೋರಕುಮಾರ ನೇತೃತ್ವದ ನಿಯೋಗದಿಂದ, ಮನವಿ ಸ್ವೀಕರಿಸಿದ ಸಚಿವರು, ಭರವಸೆ ನೀಡಿದರು.*

*ಹರ್ಷ/ಹೊಂಗಲ್/ಕೆ.ವಾ.ಇ.ಬೆಂ/ಏಕ್ಸ್ ಖಾತೆ*

<><><>

*ಈಗ ಪ್ರಕಟಣೆ,*
*ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..*
***(1 ನಿ. 4 ಸೆ.)***

<><><>

*ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..*

<><><>

*ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ* **x** *ಖಾತೆ* **@airnews_dharwad** *ಹಾಗೂ*

*ನಮ್ಮ ಫೇಸ್ಬುಕ್ ಖಾತೆ* **Airrnu Dharwad** *ಅನುಸರಿಸಿ.*

<><><>

*ಕಾಶಿ/ಸಿದ್ಧಾಂತ ಶಿಖಾಮಣಿ*

*ಅಜ್ಞಾನದ ಕತ್ತಲೆಯಿಂದ, ಸುಜ್ಞಾನದ ಬೆಳಕಿನೆಡೆಗೆ ಕರೆದೊಯ್ಯುವ, ಮಹತೋಮಹೀಯ, ಅಣೋರಣೀಯ ಗುರುವಿಗೆ, ಗೌರವಾರ್ಪಿಸುವ, ಗುರು ಪೂರ್ಣಿಮೆ ಹಾಗೂ ಶ್ರೀ ಹಡಪದ ಅಪ್ಪಣ್ಣವರ ಜಯಂತಿಯನ್ನು, ನಾಡಿನಾದ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸಿದ, ವರದಿಗಳು ಬಂದಿವೆ.*

<><><>

*ಗುರು ಪೂರ್ಣಿಮೆಯಂದು, ಹರಿಯಾಣಾದ ಕುರುಕ್ಷೇತ್ರದಲ್ಲಿ, ಪಂಜಾಬಿ ಭಾಷೆಯ, 'ಶ್ರೀ ಸಿದ್ಧಾಂತ ಶಿಖಾಮಣಿ' ಗ್ರಂಥ ಲೋಕಾರ್ಪಣೆಗೊಂಡಿತು.*

*ವಾರಾಣಸಿ, ಕಾಶಿ ಜ್ಞಾನಪೀಠದ ಪ್ರಕಾಶನ, ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಮಾರ್ಗದರ್ಶನದಲ್ಲಿ, ವಿದ್ವಾಂಸರು, ಅನುವಾದಿಸಿದ್ದಾರೆ.*

*ಮೂಲತಃ, ಬಾಗಲಕೋಟೆ ಜಿಲ್ಲೆ, ತೋಗುಣಸಿ ಗ್ರಾಮದವರಾದ, ಕಾಶಿ ಜ್ಞಾನ ಪೀಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.*

<><><>

*ಶ್ರೀ ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಧ್ವನಿ 35 ಸೆಕೆಂದುಗಳು*

<><><>

*ಮಧ್ಯಸ್ಥಿಕೆ90*

*'ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ', 90 ದಿನಗಳ ಜನತಾ ನ್ಯಾಯಾಲಯ, ಲೋಕ್ ಅದಾಲತ್, ಅಕ್ಟೋಬರ್ 7ರ ವರೆಗೆ, ರಾಜ್ಯಾದ್ಯಂತ ಜರುಗಲಿದೆ.*

*ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ರಾಜೀ ಸಂಧಾನಕ್ಕೆ ಯೋಗ್ಯ ಪ್ರಕರಣಗಳನ್ನು, ಕಕ್ಷಿದಾರರ ಸಮಕ್ಷಮ ಪರಿಹರಿಸಲು, ಯೋಜಿಸಲಾಗಿದೆ.*

*ಜಿಲ್ಲಾ ನ್ಯಾಯಾಲಯಗಳ ಸಮುಚ್ಛಯದಲ್ಲಿರುವ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳ ಹಾಗೂ ತಾಲೂಕು ನ್ಯಾಯಾಲಯಗಳ ಆವರಣಗಳಲ್ಲಿರುವ, ಮಧ್ಯಸ್ಥಿಕೆ ಕೇಂದ್ರಗಳಲ್ಲಿ, ರಾಜೀ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಳ್ಳಬಹುದು.*

*ಬೆಂಗಳೂರು, ಧಾರವಾಡ ಮತ್ತು ಕಲಬುರಗಿ ಉಚ್ಚ ನ್ಯಾಯಾಲಯಗಳ, ಆವರಣಗಳಲ್ಲಿರುವ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ಸಹ, ಲೋಕ್ ಅದಾಲತ್‌ಗೆ ಅವಕಾಶ ಕಲ್ಪಿಸಲಾಗಿದೆ. ನಾಲ್ಸಾ ಸಹಾಯವಾಣಿ ಸಂಖ್ಯೆ -1-5-1-0-0 ಸಂಪರ್ಕಿಸಬಹುದು.*

*ಹರ್ಷ/ಹೊಂಗಲ್/ಕೆ.ವಾ.ಇ.ಬೆಂ.*

*ಜನಸಂಖ್ಯಾ ದಿನ*

*'ನ್ಯಾಯಯುತ ಮತ್ತು ಭರವಸೆಯ ಜಗತ್ತಿನಲ್ಲಿ, ಯುವಜನರು ಬಯಸುವ ಕುಟುಂಬಗಳನ್ನು ರಚಿಸಲು, ಅವರನ್ನು ಸಬಲೀಕರಣಗೊಳಿಸುವುದು' ಎಂಬ ಧ್ಯೇಯದಡಿ, ಇಂದು ವಿಶ್ವ ಜನಸಂಖ್ಯಾ ದಿನಾಚರಣೆ.*

*ವಿಶ್ವ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದಡಿ, ಕುಟುಂಬ ಯೋಜನೆ, ಲಿಂಗ ಸಮಾನತೆ ಮತ್ತು ಬಡತನದಂತಹ, ಜನಸಂಖ್ಯಾ ಸ್ಫೋಟದ ಸಮಸ್ಯೆಗಳ ಬಗ್ಗೆ, ಜನರಿಗೆ ಶಿಕ್ಷಣ ನೀಡಲು, ಈ ದಿನ ಮೀಸಲಿದೆ.*

ಜನಸಂಖ್ಯಾ ಬೆಳವಣಿಗೆ, ಅಭಿವೃದ್ಧಿ ಮತ್ತು ಪರಿಸರದ ಮೇಲೆ ಬೀರುವ ಪರಿಣಾಮ ಸೇರಿದಂತೆ, ಜಾಗತಿಕ ಜನಸಂಖ್ಯಾ ಸಮಸ್ಯೆಗಳ ಬಗ್ಗೆ, ಜಾಗೃತಿ ಮೂಡಿಸಲು ಇಂದು ವಿಶೇಷ ಕಾರ್ಯಕ್ರಮಗಳು ಆಯೋಜಿತವಾಗಿವೆ.

ಸೋಮಣ್ಣ/ರೈಲು

ಚಿಕ್ಕಮಗಳೂರು – ಬೆಂಗಳೂರು ತಿರುಪತಿ ಎಕ್ಸ್‌ಪ್ರೆಸ್, ನೂತನ ರೈಲು ಸಂಚಾರಕ್ಕೆ, ಇಂದು ಬೆಳಗ್ಗೆ 11 ಗಂಟೆಗೆ, ಚಿಕ್ಕಮಗಳೂರು ರೈಲು ನಿಲ್ದಾಣದಲ್ಲಿ, ಕೇಂದ್ರ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಚಾಲನೆ ನೀಡಲಿದ್ದಾರೆ.

ಉಡುಪಿ, ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಗಣ್ಯರು ಪಾಲ್ಗೊಳ್ಳದ್ದಾರೆ.

<><><>

ವಿಜಯನಗರ ಜಿಲ್ಲೆಯ, ಶ್ರೀ ಗುರುಸಿದ್ದೇಶ ಕೋತಂಬ್ರಿ ಅವರನ್ನು, ರೇಲ್ವೆ ಖಾತೆ ಸಚಿವರ, ವಿಶೇಷ ಆಸಕ್ತಿ ವರ್ಗದ, ಝೆಡ್.ಆರ್.ಯು.ಸಿ.ಸಿ. ಗೆ ಸದಸ್ಯರಾಗಿ ಆಯ್ಕೆ ಮಾಡಲಾಗಿದೆ ಎಂದು, ನೈರುತ್ಯ ರೇಲ್ವೆ ವಲಯದ, ಹುಬ್ಬಳ್ಳಿ ವಿಭಾಗದ ಮಹಾ ಪ್ರಬಂಧಕರು, ತಿಳಿಸಿದ್ದಾರೆ.

ಹರ್ಷ/ಹೊಂಗಲ್/ಪ್ರಕಟಣೆ/ಪಿಟಿಸಿ ಚಿಕ್ಕಮಗಳೂರು (15)ಪ್ರಕಟಣೆ

ಭಲವಾದಿ/ಸಂವಿಧಾನ

ಬಿಜೆಪಿಯ ಪರಿಶಿ ್ಟ ಜಾತಿ, ಪರಿಶಿ ್ಟ ಪಂಗಡ ಮೋರ್ಚಾ ವತಿಯಿಂದ, ಸಂವಿಧಾನ ಸನ್ಮಾನ ಅಭಿಯಾನದ ಅಂಗವಾಗಿ, ಮನೆ–ಮನಕ್ಕೆ ಸಂವಿಧಾನ, ಹರ್ ಘರ್ ಸಂವಿಧಾನ ಪರಿಕಲ್ಪನೆಯ, ಚಿತ್ರ ಶೀರ್ಷಿಕೆಯನ್ನು, ವಿಧಾನ ಪರಿ ್ತಿನ ವಿಪಕ್ಷ ನಾಯಕ, ಭಲವಾದಿ ನಾರಾಯಣಸ್ವಾಮಿ, ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು.

ಹರ್ಷ/ಹೊಂಗಲ್/ಪ್ರಕಟಣೆ/ಡಿಡಿ ಚಂದನ

ಬಿಳಿಮಲೆ/ಕನ್ನಡ

ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು ಸೇರಿದಂತೆ, ಗಡಿ ಭಾಗದ ಶಾಲೆಗಳಲ್ಲಿ, ಕನ್ನಡ ಶಿಕ್ಷಕರ ಕೊರತೆ ಹಾಗೂ ಕನ್ನಡ ಭಾಷೆ ಪರೀಕ್ಷೆಯಲ್ಲಿ, ಅನುತ್ತೀರ್ಣಗೊಂಡ, ವಿದ್ಯಾರ್ಥಿಗಳ ಅಂಕಿ ಅಂಶಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸುವಂತೆ, ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಕನ್ನಡ ಅನುಷ್ಠಾನದ, ಪ್ರಗತಿ ಪರಿಶೀಲಿಸಿ, ಮಾತನಾಡಿದರು.

ಹರ್ಷ/ಹೊಂಗಲ್/ಪಿಟಿಸಿ ಬೆಳಗಾವಿ (06)

ಬೆಲ್ಲದ ಆಗ್ರಹ

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ನೌಕರರು, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ಧರಣಿ ನಡೆಸುತ್ತಿದ್ದು, ಸಾರ್ವಜನಿಕರಿಗೆ ತೊಂದರೆತಾಗಿದೆ; ಈ ವಿ ’ಯವನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿ, ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ ಆಗ್ರಹಿಸಿದ್ದಾರೆ.

ಹರ್ಷ/ಹೊಂಗಲ್/ಪ್ರಕಟಣೆ

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಆತ್ಮ ನಿರ್ಭರ ಭಾರತ ಅಭಿಯಾನ: ಪ್ರಧಾನಮಂತ್ರಿಗಳ, ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ಯೋಜನೆ, 2026ರ ಮಾರ್ಚ್ ಅಂತ್ಯದ ವರೆಗೆ, ವಿಸ್ತರಣೆ.
- ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ, ಜೇನು ಸಾಕಣೆ ಉದ್ಯಮಕ್ಕೆ, ‘ಸ್ಮಾಲ್ ಹೈವ್ ಬೀಟಲ್’ ಕೀಟ ಬಾಧೆ.
- ‘ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ’: ಅಕ್ಟೋಬರ್ 7ರ ವರೆಗೆ, ರಾಜ್ಯಾದ್ಯಂತ, 90 ದಿನಗಳ ಲೋಕ್ ಅದಾಲತ್.
- ಇಂದು, ವಿಶ್ವ ಜನಸಂಖ್ಯಾ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

ಮುಖ್ಯಮಂತ್ರಿ/ಮಹಿಳೆ

ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ವಿಡಿಯೋ ಚಿತ್ರೀಕರಣ, ಬಳಿಕ ಜಾಲತಾಣಗಳಲ್ಲಿ ಹಂಚಿಕೊಂಡು, ಮಹಿಳೆಯರ ಗೌರವಕ್ಕೆ ಧಕ್ಕೆಯುಂಟು ಮಾಡುವವರ ವಿರುದ್ಧ ತೀವ್ರ ನಿಗಾ ವಹಿಸಲಾಗಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಮಹಿಳೆಯರ ಘನತೆಗೆ ಚ್ಯುತಿಯುಂಟು ಮಾಡುವ, ವಿಡಿಯೋಗಳು ಅಥವಾ ಖಾತೆಗಳು ಕಂಡಲ್ಲಿ, ತಕ್ಷಣವೇ ಸೈಬರ್ ಘಟಕದ ಸಹಾಯವಾಣಿ, 1930 ಗೆ ಕರೆಮಾಡಿ ಅಥವಾ ಜಾಲತಾಣ cybercrime.gov.in ನಲ್ಲಿ ದೂರು ದಾಖಲಿಸುವಂತೆ, ಸಿದ್ದರಾಮಯ್ಯ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಕೋರಿದ್ದಾರೆ.

ಹರ್ಷ/ಹೊಂಗಲ್/ಎಕ್ಸ್ ಖಾತೆ

ಸಂತೋಷ ಲಾಡ/ಕಾರ್ಮಿಕ

ರಾಜ್ಯದ 10 ಜಿಲ್ಲೆಗಳಲ್ಲಿ, ಶ್ರಮಿಕರ ತಾತ್ಕಾಲಿಕ ವಸತಿ ಸಮುಚ್ಛಯಗಳನ್ನು ನಿರ್ಮಿಸಲಾಗುತ್ತಿದೆ; 7 ಸಾವಿರ ಕಾರ್ಮಿಕರಿಗೆ ಅನುಕೂಲವಾಗಲಿದೆ ಎಂದು, ಕಾರ್ಮಿಕ ಖಾತೆ ಸಚಿವ, ಸಂತೋಷ ಲಾಡ ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕು, ಓಬದೇನಹಳ್ಳಿಯಲ್ಲಿ ಅವರು ಮಾತನಾಡಿದರು.

ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ, ಸಾಮಾಜಿಕ ಭದ್ರತೆ ಒದಗಿಸಲಾಗುತ್ತಿದೆ. ರಾಜ್ಯದ ಅಸಂಘಟಿತ ವಲಯದ, ಗಿಗ್ ಕಾರ್ಮಿಕರ ಹಿತ ಕಾಯಲು, 23 ವಲಯಗಳ ಅಸಂಘಟಿತ ವರ್ಗಗಳ ಕಾರ್ಮಿಕರನ್ನು ನೋಂದಾಯಿಸಿ, ಸ್ಮಾರ್ಟ್ ಕಾರ್ಡ್‌ಗಳನ್ನು ನೀಡಲಾಗುತ್ತಿದೆ ಎಂದರು.

ಸಿಂಧ್ಯಾ/ಎಕ್ಸಲನ್ಸ್

ಭಾರತ ರತ್ನ, ಸರ್ ಮೋಕ್ಷಗುಂಡಂ ವಿಶ್ವೇಶ್ವರಾಯ ಅವರ ಜೀವನ ಮತ್ತು ಸಾಧನೆ ಚಿರಸ್ಮರಣೀಯ ಎಂದು, ಕೇಂದ್ರ ಸಂವಹನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ, ಹೇಳಿದ್ದಾರೆ.

ಬೆಂಗಳೂರಿನ ನಾಗರಬಾವಿಯಲ್ಲಿ, ವಿಶ್ವೇಶ್ವರಾಯ ತಾಂತ್ರಿಕ ಹಾಗೂ ಅಭಿಯಾಂತ್ರಿಕ ವಿಶ್ವವಿದ್ಯಾಲಯದ 'ಹಬ್ ಆಂಡ್ ಸ್ಪೋಕ್ ಸೆಂಟರ್ ಆಫ್ ಎಕ್ಸ್‌ಲನ್ಸ್ ಉದ್ಘಾಟಿಸಿ, ಇದು, ಕಲಿಕೆಯ ದೀಪಸ್ತಂಭ ಎಂದು, ಬಣ್ಣಿಸಿದರು.

ಯುವ ಅಭಿಯಂತರರು, ವಿಶ್ವೇಶ್ವರಾಯ ಅವರ ಸಾಧನೆಯನ್ನು ಮಾದರಿಯಾಗಿಸಿಕೊಂಡು, ದೇಶದ ಅಭಿವೃದ್ಧಿಯಲ್ಲಿ, ಉತ್ತಮ ಕೊಡುಗೆ ನೀಡುವಂತೆ, ಕರೆ ನೀಡಿದರು.

ಕೌಶಲಾಭಿವೃದ್ಧಿ ಖಾತೆ ಸಚಿವ ಶರಣಪ್ರಕಾಶ ಪಾಟೀಲ ಮಾತನಾಡಿ, ರಾಷ್ಟ್ರೀಯ ನಾವಿನ್ಯತೆ ಕೇಂದ್ರವಾಗಿ ಕಾರ್ಯನಿರ್ವಹಿಸಲಿರುವ, ನೂತನ ಕೇಂದ್ರ, ಸಂಶೋಧನೆ ಮತ್ತು ನಾವಿನ್ಯತೆ ಕೇಂದ್ರ, ಹೊಸ ಮನ್ವಂತರಕ್ಕೆ ಕಾರಣವಾಗಲಿದೆ, ಎಂದರು.

ವಿ.ಟಿ.ಯು. ಉಪ ಕುಲಪತಿ, ಎಸ್.ವಿದ್ಯಾಶಂಕರ್ ಪಾಲ್ಗೊಂಡಿದ್ದರು.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ./ಪಿಐಬಿ/ನ್ಯೂಸ್ ಆನ್ ಏರ್/ಡಿಡಿ ಚಂದನ/ಎಕ್ಸ್ ಖಾತೆ

ಸಿಂಧ್ಯಾಡಾಕ್ ಸೇವಕ

ಗ್ರಾಮೀಣ ಅಂಚೆ ಸೇವೆಗಳ ಬೆನ್ನೆಲುಬು, ಗ್ರಾಮೀಣ ಡಾಕ್ ಸೇವಕರು. ಡಾಕ್ ಸೇವೆ ಜನಸೇವೆ ಎಂದು, ಕೇಂದ್ರ ಸಂವಹನ ಖಾತೆ ಸಚಿವ ಜ್ಯೋತಿರಾದಿತ್ಯ ಸಿಂಧ್ಯಾ ಹೇಳಿದ್ದಾರೆ.

ಬೆಂಗಳೂರಿನ ಸರ್ ಪುಟ್ಟಣ್ಣ ಚೆಟ್ಟಿ ಪುರ ಭವನದಲ್ಲಿ, ಭಾರತೀಯ ಅಂಚೆ ಇಲಾಖೆ ಆಯೋಜಿಸಿದ್ದ, ಸಂವಾದ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಕರ್ನಾಟಕದ ಅಂಚೆ ಸೇವೆ, ವಾರ್ಷಿಕ 200 ಕೋಟಿಗೂ ಹೆಚ್ಚು ಪಾರ್ಸೆಲ್ ಹಾಗೂ ಅಂಚೆ ಸೇವೆಯನ್ನು ಒದಗಿಸುತ್ತಿದೆ ಎಂದು, ಶ್ಲಾಘಿಸಿದರು.

ಅತ್ಯುತ್ತಮ ಸೇವೆ ಒದಗಿಸಿದ, ಕರ್ನಾಟಕ ಅಂಚೆ ವೃತ್ತದ 15 ಗ್ರಾಮೀಣ ಡಾಕ್ ಸೇವಕರನ್ನು, ಸಚಿವರು ಸನ್ಮಾನಿಸಿದರು.

ಅಂಚೆ ಇಲಾಖೆಯ ಕಾರ್ಯದರ್ಶಿ ವಂದಿತಾ ಕೌಲ್, ಹಿರಿಯ ಅಧಿಕಾರಿಗಳು ಹಾಗೂ ಡಾಕ್ ಸೇವಕರು ಪಾಲ್ಗೊಂಡಿದ್ದರು.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ.